**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-173/2018**

ಪಿ.ಡಬ್ಲ್ಯೂಃ- 4
ಸಿ.ಡಬ್ಲ್ಯೂಃ-4

| | | |
|---|---|---|
| ಸಾಕ್ಷಿದಾರರ ಹೆಸರುಃ | : | ರವಿ |
| ತಂದೆಯ ಹೆಸರುಃ | : | ಚಂದ್ರಶೇಖರ |
| ವಯಸ್ಸುಃ | : | 42 ವರ್ಷ |
| ವೃತ್ತಿಃ | : | ಬೇಕರಿ ಉದ್ಯೋಗ |
| ವಾಸಃ | : | ಹಾಲಿ ವಾಸ ಕೊಪ್ಪಳ |

**ದಿನಾಂಕಃ 18-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ-

ನ್ಯಾಯಾಲಯದ ಮುಂದಿರುವ ಆರೋಪಿ 1, 3 ರಿಂದ 5, 7, 9 ಹಾಗೂ 10 ಹಾಗೂ ಆರೋಪಿ 2, 6 ಹಾಗೂ 8 ನನಗೆ ಗೊತ್ತು. ಆರೋಪಿಗಳು ನನ್ನ ಸಂಬಂಧಿಕರು. ಚಾಸಾ-1 ಪರಮೇಶ ಹಾಗೂ ಚಾಸಾ-3 ಮಲ್ಲಿಕಾರ್ಜುನ ನನ್ನ ದೊಡ್ಡಮ್ಮನ ಮಕ್ಕಳು. ಚಾಸಾ-2 ವಿಶಾಲಾಕ್ಷಿ, ಚಾಸಾ-3 ಮಲ್ಲಿಕಾರ್ಜುನರವರ ಪತ್ನಿ ಚಾಸಾ-6 ರಿಂದ 8 ನನಗೆ ಗೊತ್ತು. ಚಾಸಾ-5 ನನಗೆ ಗೊತ್ತಿಲ್ಲ.

2. ದಿನಾಂಕಃ 28.11.2016 ರಂದು ಪುಷ್ಪಗಿರಿಯಲ್ಲಿ ಜಾತೆ ಇದ್ದ ಕಾರಣ ನಾನು ಕೊಪ್ಪಳದಿಂದ ನನ್ನ ಅಣ್ಣ ಚಾಸಾ-3 ಮಲ್ಲಿಕಾರ್ಜುನರವರ ಮನೆಗೆ ಬಂದಿದ್ದೆ. ಪ್ರಭುವಯ್ಯ ಹಾಗೂ ಚಾಸಾ-3 ಮಲ್ಲಿಕಾರ್ಜುನರವರ ನಡುವೆ ನಿವೇಶನಕ್ಕೆ ಸಂಬಂಧಿಸಿದಂತೆ ತಕರಾರು

ಇತ್ತು. ಬೆಳಗ್ಗೆ ಸುಮಾರು 7.30 ಗಂಟೆ ಸಮಯದಲ್ಲಿ ಈ ಪ್ರಕರಣದ ಆರೋಪಿಗಳು ಇಬ್ಡಾಣೆ ಗ್ರಾಮದಲ್ಲಿರುವ ಚಾಸಾ–3 ಮಲ್ಲಿಕಾರ್ಜುನರವರು ವಾಸವಾಗಿದ್ದ ಮನೆಗೆ ಹೊಂದಿಕೊಂಡಂತೆ ಇದ್ದ ಕಡಿಯಾರವನ್ನು ಕಿತ್ತುಹಾಕಲು ಬಂದರು. ಆ ಕಾಲದಲ್ಲಿ ಚಾಸಾ.1 ಪರಮೇಶ ಹಾಗೂ ಚಾಸಾ–3 ಮಲ್ಲಿಕಾರ್ಜುರವರು ಆರೋಪಿಗಳು ಕಡಿಯಾರವನ್ನು ಕೀಳಲು ಬಂದಿರುವ ಬಗ್ಗೆ ಪ್ರಶ್ನಿಸಿದರು. ಆ ಕಾಲದಲ್ಲಿ 1 ಆರೋಪಿ ಪಾಲಾಕ್ಷರವರು ಹಾರೆಯಿಂದ ಚಾಸಾ–1 ಪರಮೇಶರವರ ತಲೆಗೆ ಹೊಡೆದರು. ಗಲಾಟೆ ಕಾಲದಲ್ಲಿ 2ನೇ ಆರೋಪಿ ಕುಮಾರವರು ಮಚ್ಚಿನಿಂದ ಚಾಸಾ–1 ಪರಮೇಶರವರ ತಲೆಗೆ ಹೊಡೆದು ಗಾಯಪಡಿಸಿದರು. ಆರೋಪಿಗಳ ಹಲ್ಲೆಯಿಂದ ಚಾಸಾ–1 ಪರಮೇಶ ಮೂರ್ಛೆ ಹೋದರು. ನಾನು ಜಗಳ ಬಿಡಿಸಲು ಹೋದಾಗ 9ನೇ ಆರೋಪಿ ಶಂಕರ ಒಂದು ರೀಪೀಸಿನಿಂದ ನನ್ನ ಎಡಗೈಗೆ ಹೊಡೆದು ಗಾಯಪಡಿಸಿದರು. ಉಳಿದ ಆರೋಪಿಗಳು ಚಾಸಾ–2 ವಿಶಾಲಾಕ್ಷಿ ರವರಿಗೆ ಬೈದಿರುತ್ತಾರೆ. ಗಾಯಗೊಂಡ ಪರಮೇಶರವರನ್ನು ನಾವು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಘಟನೆ ಕಾಲದಲ್ಲಿ 2ನೇ ಆರೋಪಿ ಕುಮಾರ ಓಡಿಹೋಗುವ ಚರಂಡಿಗೆ ಬಿದ್ದು ಗಾಯಗೊಂಡಿರುತ್ತಾನೆ. ಗಾಯಗೊಂಡಿದ್ದ ಚಾಸಾ–1 ಪರಮೇಶ್ವರನನ್ನು ನಾವು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಗಾಯಗೊಂಡಿದ್ದ ನಾನು ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನನ್ನ ಗಾಯಕ್ಕೆ ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಹೊಲಿಗೆ ಹಾಕಲಾಗಿರುತ್ತದೆ. ಘಟನೆಗೆ ಸಂಬಂಧಿಸಿದಂತೆ ನಾನು ಪೊಲೀಸರಿಗೆ ನನ್ನ ಹೇಳಿಕೆ ನೀಡಿರುತ್ತೇನೆ. ಆರೋಪಿಗಳು ಹಲ್ಲೆ ನಡೆಸಲು ಬಳಸಿದ ಹಾರೆ, ಮಚ್ಚು ಹಾಗೂ ರಿಪೀಸು ಪಟ್ಟಿಗಳು ಮು.ಮಾ–1 ರಿಂದ 4 ಆಗಿರುತ್ತವೆ ಎಂದು ಸಾಕ್ಷಿದಾರರು ನ್ಯಾಯಾಲಯದ ಮುಂದೆ ಗುರುತಿಸಿರುತ್ತಾರೆ. ಘಟನೆಯ ಕಾಲದಲ್ಲಿ 3ನೇ

ಆರೋಪಿ ಒಂದು ರಾಡಿನಿಂದ ಮಲ್ಲಿಕಾರ್ಜುನರವರ ತೊಡೆಗೆ ಹೊಡೆದಿರುತ್ತಾನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಕೀಲರಿಂದಃ**

ನಾನು ಸುಮಾರು 18 ವರ್ಷಗಳಿಂದ ಕೊಪ್ಪಳದಲ್ಲಿ ವಾಸವಾಗಿರುತ್ತೇನೆ. ಕೊಪ್ಪಳದಿಂದ ಇಬ್ಬಾಣೆ ಗ್ರಾಮ ಸುಮಾರು 300 ಕಿ.ಮೀ. ದೂರದಲ್ಲಿದೆ. ನಾನು ಪುಷ್ಪಗಿರಿ ಜಾತ್ರೆಗೆ ಸಂಬಂಧಿಸಿದಂತೆ ಚಾಸಾ-3 ಮಲ್ಲಿಕಾರ್ಜುನರವರ ಮನೆಗೆ ಬಂದಿದ್ದೆ ಎನ್ನುವ ಬಗ್ಗೆ ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ತಿಳಿಸದೆ ಮೊದಲ ಬಾರಿ ನ್ಯಾಯಾಲಯದಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕಃ 28.11.2016 ರಂದು ನಡೆದ ಗಲಾಟೆಗೆ ಸಂಬಂಧಿಸಿದಂತೆ ನನ್ನ ವಿರುದ್ಧ ಸಹ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ ಎಂದರೆ ಸರಿ. ನನ್ನ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾದ ನಂತರ ನಾನು ತಲೆಮರೆಸಿಕೊಂಡು ಜಿಲ್ಲಾ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಸಲ್ಲಿಸಿದ್ದೆ ಎಂದರೆ ನಾನು ತಲೆಮರೆಸಿಕೊಂಡಿರಲಿಲ್ಲ ಆದರೆ ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಿದ್ದೆ. ದಿನಾಂಕಃ 06.02.2017 ರಂದು ನಾನು ನ್ಯಾಯಾಲಯಕ್ಕೆ ಶರಣಾಗಿದ್ದೇನೆ ಎಂದರೆ ಸರಿ. ಅಲ್ಲಿಯವರೆಗೂ ಪೊಲೀಸರು ನನಗೆ ಬಂಧಿಸುತ್ತಾರೆ ಎಂದು ನಾನು ಹೊರಗಡೆ ಇದ್ದೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಶರಣಾಗುವವರೆಗೂ ಪ್ರಶ್ನಿತ ಘಟನೆಯ ನಂತರ ನಾನು ಹಾಸನಕ್ಕೆ ಬಂದಿರುವುದಿಲ್ಲ ಎಂದರೆ ಸರಿ. ನಾನು ತಲೆಮರೆಸಿಕೊಂಡಿದ್ದ ಕಾರಣದಿಂದ ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಘಟನಾ ಸ್ಥಳಕ್ಕೆ ಮಹಜರ್ ಬರೆಯುವುದಕ್ಕೆ ಬಂದಿದ್ದ ಕಾಲದಲ್ಲಿ ನನ್ನ ಹೇಳಿಕೆ ಪಡೆದಿರುತ್ತಾರೆ. ಘಟನೆಯ 2-3 ದಿನಗಳ ನಂತರ ಪೊಲೀಸರು ಮಹಜರ್ ತಯಾರಿಸಲು ಸ್ಥಳಕ್ಕೆ ಬಂದಿದ್ದರು. ನಾನು ಸ್ಥಳಮಹಜರಿಗೆ ನನ್ನ ಸಹಿ ಮಾಡಿಲ್ಲ. ನಾನು

ಪೊಲೀಸ್ ನವರು ಮಹಜರಿಗೆ ಬಂದ ಕಾಲದಲ್ಲಿ ಪೊಲೀಸರಲ್ಲಿ ನನ್ನ ಹೇಳಿಕೆ ನೀಡಿರುತ್ತೇನೆ ಎಂದು ಮೊದಲನೆ ಬಾರಿ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರಶ್ನಿತ ಕಡಿಯಾರಕ್ಕೆ ಸಂಬಂಧಿಸಿದಂತೆ ಪ್ರಭುವಯ್ಯ ಮತ್ತು ವಿಶಾಲಾಕ್ಷಿ ಹಾಗೂ ಮಲ್ಲಿಕಾರ್ಜುನರವರ ನಡುವೆ ಒಂದು ಅಗ್ರಿಮೆಂಟ್ ಆಗಿತ್ತು ಇದರ ಬಗ್ಗೆ ನಿಮಗೆ ಮಾಹಿತಿ ಇರುತ್ತದೆಯೋ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿದಾರರು ಅದು ಸುಳ್ಳು ಅಗ್ರಿಮೆಂಟ್ ಆಗಿತ್ತು ತನಗೆ ಈ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಪ್ರಶ್ನಿತ ಹಲ್ಲೆ ನಡೆದಾಗ ಚಾಸಾ–1 ಪರಮೇಶರವರು ಸ್ಥಳದಲ್ಲಿ ಮೂರ್ಛೆ ಹೋದರು ಎಂಬುದನ್ನು ಮೊದಲನೆ ಬಾರಿ ನ್ಯಾಯಾಲಯದಲ್ಲಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಶಂಕರ್ ರವರು ನನ್ನ ಎಡಗೈಗೆ ರಿಪೀಸ್ ಪಟ್ಟಿಯಿಂದ ಹೊಡೆದು ಗಾಯಪಡಿಸಿದರು ಎನ್ನುವ ಬಗ್ಗೆ ಮೊದಲನೆ ಬಾರಿ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. 2ನೇ ಆರೋಪಿ ಕುಮಾರ ಘಟನೆಯ ಕಾಲದಲ್ಲಿ ಚರಂಡಿಗೆ ಬಿದ್ದು ಗಾಯಪಡಿಸಿಕೊಂಡ ಎನ್ನುವ ಬಗ್ಗೆ ಮೊದಲನೆ ಬಾರಿ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಗಾಯಗೊಂಡ ನಾನು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಗಾಯಕ್ಕೆ ಹೊಲಿಗೆ ಹಾಕಿಸಿಕೊಂಡಿರುತ್ತೇನೆ ಎನ್ನುವ ಬಗ್ಗೆ ಮೊದಲನೆ ಬಾರಿ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಶಂಕರ ಹಾಗೂ ಕುಮಾರ ನನ್ನ ಸಂಬಂಧಿಕರಲ್ಲ. ನಾನು ಹಾಗೂ ಓಂಕಾರರವರು 1ನೇ ಆರೋಪಿ ಪಾಲಾಕ್ಷರವರಿಗೆ ದೊಣ್ಣೆಯಿಂದ ಮಾರಣಾಂತಿಕ ಹಲ್ಲೆ ನಡೆಸಿರುತ್ತೇವೆ ಎಂಬ ಬಗ್ಗೆ ನನ್ನ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸುಳ್ಳು ಪ್ರಕರಣ ದಾಖಲಾಗಿರುತ್ತದೆ. ನಾನು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನನ್ನ ಗಾಯಕ್ಕೆ ಹೊಲಿಗೆ ಹಾಕಿಸಿಕೊಂಡಿದ್ದೆ ಎನ್ನುವ ಬಗ್ಗೆ

ಯಾವುದೇ ದಾಖಲೆಯನ್ನು ಪೊಲೀಸರಿಗೆ ನೀಡಿಲ್ಲ ಎಂದರೆ ಸರಿಯಲ್ಲ. 5ನೇ ಆರೋಪಿ ವನಜಾಕ್ಷಿ ಮತ್ತು ಚಾಸಾ–3 ಮಲ್ಲಿಕಾರ್ಜುನರವರ ಮನೆ ಹಾಗೂ ನಿವೇಶನದ ಸುತ್ತಮುತ್ತ 2–3 ವಾಸದ ಮನೆಗಳು ಇರುತ್ತವೆ. ನಾನು, ಓಂಕಾರ, ಪರಮೇಶ, ಮಲ್ಲಿಕಾರ್ಜುನ ಮತ್ತು ವಿಶಾಲಾಕ್ಷಿರವರು 2ನೇ ಆರೋಪಿ ಕುಮಾರನನ್ನು ಕೊಲೆಮಾಡಿ 1ನೇ ಆರೋಪಿ ಪಾಲಾಕ್ಷನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಆ ಪ್ರಕರಣದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಚಾಸಾ–1 ಪರಮೇಶರವರ ಮೂಲಕ ಸುಳ್ಳು ಪ್ರಕರಣವನ್ನು ದಾಖಲು ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ.

ದಿನಾಂಕಃ 28.11.2016 ರಂದು ನಾನು ಕೊಪ್ಪಳದಿಂದ ಇಬ್ರಾಣೆ ಗ್ರಾಮದ ಚಾಸಾ–3 ಮಲ್ಲಿಕಾರ್ಜುನರವರ ಮನೆಗೆ ಬಂದಾಗ ಆರೋಪಿಗಳು ಕಡಿಯಾರ ಕೀಳುವ ಕಾಲದಲ್ಲಿ ಆರೋಪಿಗಳು ಚಾಸಾ–1 ಪರಮೇಶ ಹಾಗೂ ಚಾಸಾ–3 ಮಲ್ಲಿಕಾರ್ಜುನ ಮತ್ತು ನನ್ನ ಮೇಲೆ ಯಾವುದೇ ವಸ್ತುಗಳಿಂದ ಹಲ್ಲೆ ನಡೆಸಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಪಾಲಾಕ್ಷ, ಚಾಸಾ–1 ಪರಮೇಶರವರ ಮೇಲೆ ಯಾವುದೇ ಹಲ್ಲೆ ನಡೆಸಿಲ್ಲ ಎಂದರೆ ಸರಿಯಲ್ಲ. 3ನೇ ಆರೋಪಿ ನಟರಾಜ ಚಾಸಾ–3 ಮಲ್ಲಿಕಾರ್ಜುನರವರ ಮೇಲೆ ಯಾವುದೇ ಹಲ್ಲೆ ನಡೆಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಶಂಕರಪ್ಪ ರಿಪೀಸ್ ಪಟ್ಟಿಯಿಂದ ನನ್ನ ಮೇಲೆ ಹಲ್ಲೆ ನಡೆಸಿಲ್ಲ ಎಂದರೆ ಸರಿಯಲ್ಲ. ಉಳಿದ ಆರೋಪಿಗಳು ನಮಗೆ ಬೈದಿಲ್ಲ ಎಂದರೆ ಸರಿಯಲ್ಲ. ಎಂ ಒ 1 ರಿಂದ 4 ಕ್ಕೂ ಆರೋಪಿಗಳಿಗೂ ಯಾವುದೇ ಸಂಬಂಧವಿರುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿಪ್ರಕರಣದಲ್ಲಿ ಆರೋಪಿ ಆಗಿರುವ ಕಾರಣದಿಂದ ಅದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.